# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ 34/2025

**ಪಿ.ಡಬ್ಲ್ಯೂಃ 14 , ಸಾಕ್ಷಿ 1**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಬಸವರಾಜು ಬಿರಾದರ ಪಾಟೀಲ್** |
| **ತಂದೆಯ ಹೆಸರು** | : | **ಮಾರುತೆಪ್ಪ** |
| **ವಯಸ್ಸು** | : | **51 ವರ್ಷ** |
| **ಕೆಲಸ** | : | **ಹೆಚ್ ಒ ಡಿ , ಬಿಮ್ಸ ಆಸ್ಪತ್ರೆ , ಬೆಳಗಾವಿ** |
| **ವಾಸ ಸ್ಥಳ** | : | **ಬೆಳಗಾವಿ** |

**ಸಾಕ್ಷಿಯನ್ನು ದಿನಾಂಕ 10.7.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಈ ಹಿಂದೆ 2010 ರಿಂದ 2025 ರ ವರೆವಿಗೂ ಬಳ್ಳಾರಿಯ ವಿಮ್ಸ ಆಸ್ಪತ್ರೆಯಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿ ಕೆಲಸ ನಿರ್ವಹಿಸಿದ್ದೆನು.

**2.** ದಿಃ28.2.2025 ರಂದು ನಾನು ಪ್ರಕರಣದ ಗಾಯಾಳು ಸಾಕ್ಷಿ ಮೂಕಮ್ಮ ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಬಳಿ ವೈದ್ಯಕೀಯ ತಪಾಸಣೆಗೆ ಒಳಪಟ್ಟಿದ್ದರು. ಸದರಿ ಗಾಯಾಳುವನ್ನು ಸಿಟಿ ಸ್ಕ್ಯಾನ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ಸದರಿ ಪರೀಕ್ಷೆಯಿಂದ ಗಾಯಾಳುವಿಗೆ ಯಾವುದೇ ಪ್ರತಿಕೂಲ ಪರಿಸ್ಥಿತಿ ಇಲ್ಲದೇಇರುವುದು ಕಂಡು ಬಂದಿರುತ್ತದೆ.

**3.** ಸದರಿ ಗಾಯಾಳು Conservative ಚಿಕಿತ್ಸಾ ಕ್ರಮಕ್ಕೆ ಒಳಪಟ್ಟಿದ್ದು ದಿಃ2.3.2025 ರಂದು ಚಿಕಿತ್ಸಾ ಕ್ರಮದಿಂದ ಬಿಡುಗಡೆ ಹೊಂದಿರುತ್ತಾರೆ.

**S.C.No. 34/2025**
**P.W.14**
**Date :10.7.2026**

**4.** ಈಗ ನನಗೆ ತೋರಿಸಿದ ದಾಖಲಾತಿಗಳು ಸದರಿ ಗಾಯಾಳುವನ್ನು ಸಿಟಿ ಸ್ಕ್ಯಾನ್ ಮತ್ತು ಇತರ ಚಿಕಿತ್ಸಾ ಕ್ರಮಗಳಿಗೆ ಒಳಪಡಿಸಿದ ಕ್ರಮವನ್ನು ರುಜುವಾತುಪಡಿಸುವ ದಾಖಲೆಗಳಾಗಿವೆ. ಅವುಗಳನ್ನು ಈಗ **ನಿಪಿ.27 ಮತ್ತು 28** ಎಂದು ಗುರುತು ಮಾಡಲಾಯಿತು.

**<u>ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಹೆಚ್ ಆರ್ ಜೆಃ ( ಎಲ್ ಎ ಡಿಸಿ) ವಕೀಲರಿಂದ:</u>**

**5.** ಗಾಯಾಳು ಒಳರೋಗಿಯಾಗಿ ನೋಂದಣಿಯಾದ ಕೂಡಲೇ ಆಕೆಗೆ ಸಿ.ಟಿ ಸ್ಕ್ಯಾನ್ ಪರೀಕ್ಷೆಗೆ ಒಳಪಡಿಸಲಾಯಿತು. ಗಾಯಾಳುವಿನ ಗಾಯದ ಹಿನ್ನೆಲೆಯ ಕುರಿತಂತೆ ಅಂದಿನ ನನ್ನ ಕಿರಿಯ ವೈದ್ಯರು ದಾಖಲಿಸಿಕೊಂಡಿದ್ದಾರೆ. ಗಾಯಾಳು ಈಗ ನನಗೆ ತೋರಿಸಿದ ಮತ್ತು ಈಗಾಗಲೇ ಗುರತುಹಚ್ಚಿದ ನಿಡಿ.1 ಎಂದು ಗುರುತು ಹಚ್ಚಿದ ಫೋಟೋದಲ್ಲಿ ಪ್ರತಿಬಿಂಬಿಸಿರುವ ನೆಲದ ಮೇಲೆ ಅಜಾಗರೂಕತೆಯಿಂದ ಬಿದ್ದಾಗಲೂ ಸಹ ನಾನು ಗಾಯಾಳುವಿನ ಚಿಕಿತ್ಸೆ ಕ್ರಮದಲ್ಲಿ ನೋಡಿದ ಗಾಯಗಳು ಸಂಭವಿಸುವ ಸಾಧ್ಯತೆ ಇದೆ ಎಂದರೆ ಸರಿ .

**<u>ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**